For More Job News Visit : www.kpscvaani.com

| | |
|---|---|
| | ಕರ್ನಾಟಕ ಲೋಕ ಸೇವಾ ಆಯೋಗ,<br>"ಉದ್ಯೋಗ ಸೌಧ", ಬೆಂಗಳೂರು-560001. |

ಸಂಖ್ಯೆ:ಪಿಎಸ್ ಸಿ 567 ಆರ್ ಟಿಬಿ (4)/2023-24/ 2361 ದಿನಾಂಕ:02-01-2024

## ಪ್ರಕಟಣೆ

ಆಯೋಗದ ಅಧಿಸೂಚನೆ ಸಂಖ್ಯೆ: ಪಿಎಸ್ ಸಿ 169 ಆರ್ ಟಿಬಿ(4) /2022-23 ದಿನಾಂಕ:30-08-2023ರಲ್ಲಿ ಅಧಿಸೂಚಿಸಲಾದ ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ವಾಣಿಜ್ಯ ತೆರಿಗೆ ಪರಿವೀಕ್ಷಕರ 15 (ಕಲ್ಯಾಣ ಕರ್ನಾಟಕ ವೃಂದದ) ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ, ದಿನಾಂಕ:06-01-2024 ಮತ್ತು 07-01-2024ರಂದು ರಾಜ್ಯದ ಆಯ್ದ ಜಿಲ್ಲೆಗಳಲ್ಲಿ ನಡೆಸಲಾಗುವ ಪರೀಕ್ಷೆ ಸಂಬಂಧ "ಪ್ರವೇಶ ಪತ್ರವನ್ನು" ಆಯೋಗದ ವೆಬ್ ಸೈಟ್ http://kpsc.kar.nic.in ರಲ್ಲಿ ದಿನಾಂಕ:02-01-2024 ರಿಂದ ಡೌನ್ ಲೋಡ್ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಅಭ್ಯರ್ಥಿಗಳು ನೊಂದಣಿ ಮಾಡಿದ ಮೊಬೈಲ್ ನಂಬರ್, ಇ-ಮೇಲ್ ಐಡಿ ಅಥವಾ Enrolement Number ಇವುಗಳಲ್ಲಿ ಯಾವುದಾದರು ಒಂದನ್ನು ನಮೂದಿಸಿ ಲಾಗಿನ್ ಮಾಡಿ Dash Board Menu ನಲ್ಲಿ Admit card Option ಗೆ ಹೋಗಿ ಅಧಿಸೂಚನೆ (Notification) Click ಮಾಡಿ ಪ್ರವೇಶ ಪತ್ರವನ್ನು ಡೌನ್ ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಪ್ರವೇಶ ಪತ್ರಗಳನ್ನು ಡೌನ್ ಲೋಡ್ ಮಾಡಲು ತಾಂತ್ರಿಕ ಸಮಸ್ಯೆ ಎದುರಾದಲ್ಲಿ Help Line ಸಂಖ್ಯೆ:080-22200090, 22346487, 30574901, 30574957 ಅನ್ನು ಸಂಪರ್ಕಿಸಬಹುದು ಹಾಗೂ ctipending@gmail.com ಗೆ ಮೇಲ್ ಮಾಡಬಹುದಾಗಿರುತ್ತದೆ.

ಆಯೋಗದಿಂದ ಪ್ರಥಮ ಬಾರಿಗೆ KPSC Udyoga Software ಅನ್ನು ಅಭಿವೃದ್ಧಿ ಪಡಿಸಲಾಗಿದ್ದು, ಸದರಿ ಪರೀಕ್ಷೆಯು ಈ ತಂತ್ರಾಂಶದ ಮೂಲಕ ನಡೆಸಲಾಗುತ್ತಿರುವ ಪ್ರಥಮ ಪರೀಕ್ಷೆಯಾಗಿರುತ್ತದೆ. ಆದ್ದರಿಂದ ಪ್ರವೇಶ ಪತ್ರದಲ್ಲಿ, ಅಭ್ಯರ್ಥಿಗಳಿಗೆ ಪರೀಕ್ಷಾ ಕೇಂದ್ರ ಹಂಚಿಕೆ ಮಾಡುವ ವಿಷಯದಲ್ಲಿ ಹಾಗೂ ನಾಮಿನಲ್ ರೋಲ್ ನಲ್ಲಿ ಭಾವಚಿತ್ರ, ಹೆಸರು ಮತ್ತು ಇನ್ನಿತರ ವಿಷಯಗಳಲ್ಲಿ ವ್ಯತ್ಯಾಸವಾಗಿರುವ ಸಂಭವವಿರುತ್ತದೆ. ಅಂತಹ ಯಾವುದಾದರೂ ವಿಷಯಗಳಿದ್ದಲ್ಲಿ ಅವುಗಳನ್ನು ಆಯೋಗದ ಮೇಲ್ಕಂಡ ಇ-ಮೇಲ್ ಗೆ ಮೇಲ್ ಮಾಡುವಂತೆ ಹಾಗೂ ಅಭ್ಯರ್ಥಿಗಳು ಯಾವುದೇ ಗೊಂದಲ ಹಾಗೂ ಆತಂಕಕ್ಕೆ ಒಳಗಾಗದೆ ಪರೀಕ್ಷೆಗೆ ಹಾಜರಾಗುವಂತೆ ತಿಳಿಸಿದೆ.

ಸಹಿ/-
(ಕೆ.ಎಸ್.ಲತಾ ಕುಮಾರಿ)
ಕಾರ್ಯದರ್ಶಿ,
ಕರ್ನಾಟಕ ಲೋಕ ಸೇವಾ ಆಯೋಗ